

ಶಿಲ್ಪದ ದೃಷ್ಟಿಯಿಂದ ಗಮನಸೆಳೆಯುವ ಈ ಕಿರುಚಿತ್ರ, ಆಶಯದ ನೆಲೆಯಲ್ಲಿ ನೋಡಿದಾಗ ತುಸು ಕೆಳಮಟ್ಟಕ್ಕೆ ಕುಸಿಯುತ್ತದೆ.

■ ಗೌರಿ

# ಕ್ಷುಲ್ಲಕ ತಪ್ಪಿಗೆ ಕ್ರೌರ್ಯದ ಶಿಕ್ಷೆ!

ಗುಂಪಿನಲ್ಲಿ ತಪ್ಪು ಮಾಡಿ ತಪ್ಪಿಸಿಕೊಳ್ಳುವುದು ಸುಲಭ. ಸಾಮೂಹಿಕ ಹತ್ಯಾಕಾಂಡಗಳಂಥ ಬರ್ಬರ ಪಾತಕಗಳಿಂದ ಹಿಡಿದು ಕ್ಲಾಸ್ ರೂಮಿನಲ್ಲಿ ಪ್ರಾಧ್ಯಾಪಕರಿಗೆ ಕೀಟಲೆ ಮಾಡಿ ತಪ್ಪಿಸಿಕೊಳ್ಳುವ ಹುಡುಗರವರೆಗೂ ಗುಂಪಿನಲ್ಲಿ ಮರೆಯಾಗುವವರು ಇದ್ದೇ ಇರುತ್ತಾರೆ. ಯಾರೂ ತನ್ನನ್ನು ಗುರ್ತಿಸಲಾರರು, ತನ್ನ ತಪ್ಪಿಗೆ ಶಿಕ್ಷೆ ಆಗಲಾರದು ಎಂಬ ಮನಸ್ಥಿತಿಯಲ್ಲಿ ಮನುಷ್ಯನೊಳಗಿನ ಮೃಗ ಹೊರಗೆ ಬರುತ್ತಾನೆ. ಅವನ ವಿರೂಪಗಳೆಲ್ಲ ಅನಾಮಿಕತೆಯ ಚಿಪ್ಪಿನೊಳಗಡೆ ಬಚ್ಚಿಟ್ಟುಕೊಳ್ಳುತ್ತವೆ. ಹೀಗೆ ತಪ್ಪು ಮಾಡಿ ಸಮೂಹದಲ್ಲಿ ಕರಗಿಹೋಗುವವರನ್ನು ಗುರ್ತಿಸುವುದು ಹೇಗೆ?

ತಪ್ಪು ಮಾಡಿ ತಪ್ಪಿಸಿಕೊಂಡವನ ಕಂಡುಹಿಡಿಯುವ ಪ್ರಸಂಗವನ್ನೇ 'ಗುಟ್ರ್ ಗೂ' ಕಿರುಚಿತ್ರ ತೋರಿಸುತ್ತದೆ. ಆದರೆ ಈ ಹುಡುಕಾಟ ಬರೀ ಒಂದು ಸನ್ನಿವೇಶದ ನಿರೂಪಣೆಯಷ್ಟೇ ಆಗಿ ಉಳಿಯುವುದು ಇದರ ಮಿತಿ.

ಡಾ. ಶ್ಯಾಮ್ ಪ್ರಸಾದ್ ಆ ಕಾಲೇಜಿಗೆ ಹೊಸದಾಗಿ ಬಂದಿದ್ದಾರೆ. ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಮೊದಲ ದಿನದ ತರಗತಿ ತೆಗೆದುಕೊಳ್ಳುತ್ತಿದ್ದಾರೆ. ಮೊದಲ ನೋಟದಲ್ಲಿಯೇ ಶಿಸ್ತಿನ ಸಿಪಾಯಿ, ಅಶಿಸ್ತನ್ನು ಸಹಿಸಿಕೊಳ್ಳುವುದಿಲ್ಲ ಎಂಬುದು ತಿಳಿಯುತ್ತದೆ. ಅವರು ಬೋರ್ಡಿನ ಕಡೆಗೆ ತಿರುಗಿ ಬರೆಸುತ್ತಿದ್ದಾಗ ವಿದ್ಯಾರ್ಥಿಗಳಲ್ಲಿ ಯಾರೋ ಒಬ್ಬರು ಗುಟ್ರ್ ಗೂ ಎಂದು ಕೂಗುತ್ತಾರೆ. ಎಲ್ಲ ವಿದ್ಯಾರ್ಥಿಗಳೂ ನಗುತ್ತಾರೆ. ಸಿಟ್ಟಿನಿಂದ ತಿರುಗಿ ಯಾರದು ಕೂಗಿದ್ದು ಎಂದು ಕೇಳಿದರೆ ಯಾರೂ ಬಾಯಿಬಿಡುವುದಿಲ್ಲ. ಕೊನೆಗೆ ಅವರು ತಮ್ಮ ಬದುಕಿನಲ್ಲೇ ನಡೆದಿದ್ದು ಎನ್ನುವ ಒಂದು ಕಥೆ ಹೇಳುತ್ತಾರೆ. ಆ ಕಥೆಯ ಮೂಲಕವೇ ತರಗತಿಯಲ್ಲಿ ಹಾಗೆ ಕೂಗಿದ್ದು ಯಾರು ಎಂಬುದನ್ನು ಕಂಡು ಹಿಡಿದು ಹೊರಗೆ ಕಳಿಸುತ್ತಾರೆ.



**ಹೆಸರು:** ಗುಟ್ರ್ ಗೂ
**ಸಂಕಲನ ಮತ್ತು ನಿರ್ದೇಶನ:** ಕಿಶನ್ ಬದರೀನಾಥ
**ಸಂಕಲನ:** ಸ್ವರ್ಶ ಆರ್‌ಕೆ.
**ಸಂಗೀತ:** ವಿಶ್ವೇಶ ಭಟ್
**ಛಾಯಾಗ್ರಹಣ:** ಕಿಟ್ಟಿ ಕೌಶಿಕ್
**ಧ್ವನಿ:** ಶಂಕರ್
**ತಾರಾಗಣ:** ಶ್ರೀಧರ ಕೆ.ಎಸ್., ಗಾನವಿ ಲಕ್ಷ್ಮಣ

ತುಂಬ ಅಚ್ಚುಕಟ್ಟಾಗಿ ಕಟ್ಟಿರುವ ಕಿರುಚಿತ್ರವಿದು. ತಾಂತ್ರಿಕವಾಗಿಯೂ, ನಿರೂಪಣೆಯ ದೃಷ್ಟಿಯಿಂದಲೂ ಗಟ್ಟಿತನ ವೃತ್ತಿಪರತೆ ಮತ್ತು ದೃಶ್ಯ ಮಾಧ್ಯಮದ ಮೇಲೆ ಒಂದು ಮಟ್ಟಿನ ಹಿಡಿತ ಇರುವುದೂ ಗೊತ್ತಾಗುತ್ತದೆ. ಗಾನವಿ ಲಕ್ಷ್ಮಣ್ ಮತ್ತು ಶ್ರೀಧರ ಕೆ.ಎಸ್. ಅವರ ನಟನೆಯೂ ಅಷ್ಟೇ ದಟ್ಟವಾಗಿ ನಮ್ಮನ್ನು ಹಿಡಿದಿಡುತ್ತದೆ.

ಆದರೆ ಕೊನೆಯಲ್ಲಿ ಈ ಎಲ್ಲ ಅಂಶಗಳ ಒಟ್ಟಾರೆ ಉದ್ದೇಶ ಏನಾಗಿದೆ? ಒಂದು ಕಲಾಕೃತಿಯಾಗಿ ಇಡೀ ಕಿರುಚಿತ್ರ ಏನನ್ನು ಹೇಳುತ್ತಿದೆ ಎಂದು ಯೋಚಿಸಿದಾಗ ನಿರಾಸೆಯಾಗುತ್ತದೆ. ಕ್ರಿಮಿನಲ್‌ಗಳ ಮೇಲೆ ಪ್ರಯೋಗಿಸುವ ತಂತ್ರವನ್ನು ತರಗತಿಯ ವಿದ್ಯಾರ್ಥಿಯ ಮೇಲೆ ಪ್ರಯೋಗಿಸಿ ಆ ಪ್ರಾಧ್ಯಾಪಕ ಸಾಧಿಸಿದ್ದೇನು? ತಾನು ಬುದ್ಧಿವಂತ ಎಂದೇ? ವಿದ್ಯಾರ್ಥಿ ಅಪರಾಧಿ ಎಂದೇ? ಅಥವಾ ಪಾಠ ಮಾಡುವ ಪ್ರಾತ್ಯಕ್ಷಿಕೆಯೇ?

ಪ್ರಾಧ್ಯಾಪಕ ತಾನು ಮೊದಲ ಬಾರಿಗೆ ವೇಶ್ಯೆಯೊಬ್ಬಳ ಮನೆಗೆ ಹೋದಾಗ ಆದ ಅನುಭವ ಎಂದು ಹೇಳಿಕೊಂಡು ಒಂದು ಕಥೆ ಕಟ್ಟುತ್ತಾನೆ. ಆ ಕಥೆಯ ಕೊನೆ ಹೇಗಿರುತ್ತದೆಂದರೆ ವೇಶ್ಯೆಯ ಮಗನೇ ಹಾಕೆ ಗುಟ್ರ್ ಗೂ ಎಂದು ಸದ್ದು ಮಾಡಿದ್ದು ಎಂಬುದನ್ನು ಸೂಚಿಸುವ ಹಾಗಿರುತ್ತದೆ. ಆಗ ಕ್ಲಾಸಿನಲ್ಲಿದ್ದ ಎಲ್ಲ ವಿದ್ಯಾರ್ಥಿಗಳೂ ಹಾಗೆ ಕೂಗಿದ ಹುಡುಗನನ್ನೇ ತಿರುಗಿ ನೋಡುತ್ತಾರೆ. ಅದರಿಂದ ಪ್ರೊಫೆಸರ್‌ಗೆ ಕೂಗಿದ್ದು ಯಾರು ಎಂದು ಗೊತ್ತಾಗಿ ಅವನನ್ನು ಕ್ಲಾಸಿಂದ ಆಚೆಗೆ ಅಟ್ಟುತ್ತಾರೆ. ಈ ಇಡೀ ಪ್ರಕ್ರಿಯೆಯಲ್ಲಿ ಪ್ರೊಫೆಸರ್ ಚಾಲಾಕಿತನವೇನೋ ಬಿಂಬಿತವಾಗುತ್ತದೆ. ಆದರೆ ಆ ಚಾಲಾಕಿತನದ ಪ್ರದರ್ಶನಕ್ಕೆ ದಾಳವಾದ ಆ ವಿದ್ಯಾರ್ಥಿಯ ಮನಸ್ಥಿತಿಯ ಕುರಿತು ನಿರ್ದೇಶಕರಿಗೆ ಕಾಳಜಿ ಇದ್ದಂತಿಲ್ಲ. ವಿದ್ಯಾರ್ಥಿಗೆ ಅವಮಾನ ಮಾಡಿ ಅವನನ್ನು ಕಂಡುಹಿಡಿಯುವ ಪ್ರಕ್ರಿಯೆಯೇ ಅಮಾನವೀಯವಲ್ಲವೇ ಎಂಬ ಪ್ರಶ್ನೆ ಅವರಿಗೆ ಹುಟ್ಟಿದಂತಿಲ್ಲ. ಹಾಗಾಗಿಯೇ ಈ ಕಿರುಚಿತ್ರ ಹಲವು ಒಳ್ಳೆಯ ಅಂಶಗಳಿದ್ದರೂ ಕೊನೆಗೆ ತನ್ನೊಳಗೇ ಇರುವ ಕ್ರೌರ್ಯದ ಅಲಗಿನಿಂದ ಕುಸಿದುಹೋಗುತ್ತದೆ.

ಈ ಕಿರುಚಿತ್ರ ವೀಕ್ಷಣೆಗೆ bit.ly/39BMNYI ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.